**2055 (2504) ಶ್ರೀ ಸಿಂಧೂರ ಜಿ.ರಾಜಶೇಖರ (ಶಿಗ್ಗಾಂವ್) :-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ - ಸವಣೂರ ತಾಲ್ಲೂಕುಗಳಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗಿದ್ದು ಸಾರ್ವಜನಿಕರ ಆರೋಗ್ಯದ ಮೇಲೆ ಹೆಚ್ಚಿನ ದುಷ್ಪರಿಣಾಮವಾಗಿ, ತೊಂದರೆಯುಂಟಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ನಕಲಿ ವೈದ್ಯರ ಮೇಲೆ ಸರಕಾರ ಯೋಗ್ಯ ಕ್ರಮ ಕೈಗೊಂಡು ಸಾರ್ವಜನಿಕರ ಆರೋಗ್ಯ ಕಾಪಾಡಲು ಸರಕಾರ ಯಾವ ಯೋಜನೆಯನ್ನು ಹಾಕಿಕೊಂಡಿದೆ?

**ಶ್ರೀ ಆರ್.ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :**

ಅ) ಬಂದಿದೆ.

ಆ) ಕರ್ನಾಟಕ ಆಯುರ್ವೇದ ಸಿದ್ಧ, ನ್ಯಾಚುರೋಪತಿ, ಯುನಾನಿ ಮತ್ತು ಯೋಗ ಪ್ರಾಕ್ಟೀಷನರ್ಸ್ ರಿಜಿಸ್ಟ್ರೇಷನ್ ಅಂಡ್ ಮೆಡಿಕಲ್ ಪ್ರಾಕ್ಟೀಷನರ್ಸ್ ಮಿಸಲೇನಿಯಸ್ ಪ್ರಾವಿಷನ್ಸ್ ಆಕ್ಟ್ 1961ರ 40(2)ರ ಪ್ರಕಾರ, ರಿಜಿಸ್ಟ್ರಾರ್, ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿ, ಬೆಂಗಳೂರು ಇವರಿಗೆ ಸರ್ಕಾರದ ಅಧಿಸೂಚನೆ ಸಂ:ಆಕುಕ/409/ಪಿಐಎಂ/2004, ದಿ:1-12-2004 ರಲ್ಲಿ ನಕಲಿ ವೈದ್ಯರ ಬಗ್ಗೆ ಕ್ರಮ ಕೈಗೊಳ್ಳಲು ಅಧಿಕಾರ ನೀಡಲಾಗಿದೆ. ರಿಜಿಸ್ಟ್ರಾರ್‌ರವರು ಸದರಿ ತಾಲ್ಲೂಕಿಗಳಿಗೆ ಭೇಟಿ ನೀಡಿ ನಕಲಿ ವೈದ್ಯರ ಮೇಲೆ ನೋಟೀಸ್ ಜಾರಿ ಮಾಡಿ ನಕಲಿ ವೈದ್ಯರಿಂದ ಬರವಣಿಗೆ ಮೂಲಕ ಮುಚ್ಚಳಿಕೆ ಪಡೆದು ಚಿಕಿತ್ಸಾಲಯವನ್ನು ಮುಚ್ಚಿಸಲಾಗಿದೆ.

**2056 (2538) ಶ್ರೀ ಸಿಂಧೂರ ಜಿ.ರಾಜಶೇಖರ (ಶಿಗ್ಗಾಂವ್) :-** ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ ಹುಬ್ಬಳ್ಳಿ ನಗರದಲ್ಲಿರುವ ಕಿಮ್ಸ್ ಆಸ್ಪತ್ರೆಯಲ್ಲಿ ಹೊರ ರೋಗಿಗಳ ವಿಭಾಗದಿಂದ (OPD) 2003-04, 2004-05, 2005-06, 2006-07ನೇ ಸಾಲಿನಲ್ಲಿ ಸಂಗ್ರಹವಾಗಿರುವ ಹಣ ಎಷ್ಟು (ವಿವರ ಒದಗಿಸುವುದು);

ಆ) ಹೊರ ರೋಗಿಗಳ ವಿಭಾಗದಿಂದ (OPD) ಸಂಗ್ರಹವಾಗಿರುವ ಹಣವನ್ನು ಹೊರ ರೋಗಿಗಳ ವಿಭಾಗಕ್ಕೆ ವೆಚ್ಚ ಮಾಡದೇ ಬೇರೆ ಬೇರೆ ಕಟ್ಟಡಗಳ ಕಾಮಗಾರಿಗೆ,

ಸುಣ್ಣ–ಬಣ್ಣ ಕಾರ್ಯಗಳಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ವೆಚ್ಚ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಪ್ರತಿ ವರ್ಷ ವೆಚ್ಚ ಮಾಡಿರುವ ವಿವರ ಒದಗಿಸುವುದು);

ಇ) ಹೊರ ರೋಗಿಗಳ ವಿಭಾಗದಿಂದ ಸಂಗ್ರಹವಾಗಿರುವ ಹಣದ ದುರುಪಯೋಗವಾಗಿರುವ ಬಗ್ಗೆ ಸರ್ಕಾರ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕೈಗೊಳ್ಳುವ ಕ್ರಮವೇನು?

**ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :**

ಅ) ಹೊರ ರೋಗಿಗಳ ವಿಭಾಗದಿಂದ ಸಂಗ್ರಹವಾಗಿರುವ ಹಣದ ವಿವರ ಈ ಕೆಳಗಿನಂತಿದೆ.

| ವರ್ಷ | ಹೊರರೋಗಿ ಚೀಟಿ ಶುಲ್ಕ |
|---|---|
| 2003–04 | 16,47,600 |
| 2004–05 | 9,15,000 |
| 2005–06 | 30,44,510 |
| 2006–07 | 18,66,740 |
| **ಒಟ್ಟು** | **74,73,850** |

ಆ ಮತ್ತು ಇ) ಸಂಶಯದ ಮೇಲೆ ತನಿಖೆಗೆ ಆದೇಶಿಸಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ.

**2057 (2503) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) :–** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರ ತಾಲ್ಲೂಕಿನ ಸವಣೂರ ನಗರಕ್ಕೆ ಹಿಂದುಳಿದ ಬಾಲಕಿಯರ ವಸತಿ ನಿಲಯ, ಕಡಕೋಳ ಗ್ರಾಮಕ್ಕೆ ಪರಿಶಿಷ್ಟ ಜಾತಿ (ಎಸ್.ಸಿ) ಬಾಲಕರ ವಸತಿ ನಿಲಯ, ಹೂವಿನ ಶಿಗ್ಲಿ, ಕುಣಿಮೆಳ್ಳಿಹಳ್ಳಿ ಗ್ರಾಮಕ್ಕೆ ಪರಿಶಿಷ್ಟ ಪಂಗಡ (ಎಸ್.ಟಿ) ಬಾಲಕರ ವಸತಿ ಶಾಲೆ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಶಿಗ್ಗಾಂವ–ಸವಣೂರ ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಪಕ್ಕಾಗಟಾರ, ರಸ್ತೆ ನಿರ್ಮಾಣ, ಡಾಂಬರೀಕರಣ ಮಾಡದೇ ಇರುವುದು ಸರ್ಕಾರದ ಗಮನದಲ್ಲಿದೆಯೇ;